# ಕಾವ್ಯದಲ್ಲಿ ಅಕಾವ್ಯ

ಆ ಮಾತು ಬೇರೆ
ಅಥವಾ ಈ ಮಾತು ಬೇಡ
ಎನ್ನುವುದು ಕವಿತೆ
ಶಬ್ದಗಳಿಗೆ ಅಂಜದೆ (ಸೋಲದೆ)
ನನ್ನೆದುರು ನಿಂತು

ಇದ್ದದ್ದು ಇಲ್ಲದ್ದು ಎಲ್ಲ ಸೇರಿ
ನಕ್ಷತ್ರದಿಂದ ಇಳಿದಂತೆ ಬೆಳಕು
ಧರೆಗೆ
ಆಮೇಲೆ ಕಾಣದ ಹಾಗೆ ಆ ಬೆಳಕು
ಮರಳಿದ ಹಾಗೆ ಆಕಾಶಕ್ಕೆ

ಹೇಳಿಕೇಳಿ ಡೊಂಬರಾಟ ಅಂದರೆ
ಡೋಲು ಕಂಬ ಹಗ್ಗ ಮತ್ತು ಹುಡುಗಿ
ಇದ್ದಂತೆ
ನೋಡುತ್ತಿದ್ದಂತೆ ನಮ್ಮ ಮನಸ್ಸೂ
ಏರಿ ಕುಣಿದಹಾಗೆ
ಹಗ್ಗದ ಮೇಲೆ

ಯಾಕೋ ಏನೊ ಮೊನ್ನೆ
ನೋಡಬೇಕಾಯಿತು ನಾನು
ಇಲಿ ಹಿಡಿದ ಬೆಕ್ಕನ್ನು
ಅದು ನನ್ನನ್ನು ನೋಡುತ್ತ
ಗುರ್ರೆಂದು
ಆ ಇಲಿಯನ್ನು ಕೊಂದು ತಿನ್ನುವ
ಮೊದಲು ಆಡುವ ಆಟವನ್ನು

ಬಿಡಿಸಲಾರೆ ಇಲಿಯ
ಹೊಡೆಯಲು ಮನಸ್ಸಿದ್ದರೂ
ಎತ್ತಲಾರೆ ಕೈಯ

● **ಡಾ. ನಾ. ಮೊಗಸಾಲೆ**

ಕಲೆ: ವಾಗೀಶ ಹೆಗಡೆ

